# ಆಂತರಿಕ ಸೌಂದರ್ಯ



ಒಂದು ಸುಂದರವಾದ ಕಾಡಿನಲ್ಲಿ ಒಂದು ಮರಿಕಾಗೆಯು ವಾಸಿಸುತ್ತಿತ್ತು. ಅದು ತಾನು ನೋಡಲು ಸುಂದರವಾಗಿಲ್ಲವೆಂದು ಬೇಸರಪಟ್ಟುಕೊಂಡು ಕೊರಗುತ್ತಿತ್ತು. ಅದಕ್ಕಾಗಿ ಇತರರ ಜೊತೆಯಲ್ಲಿ ಸರಿಯಾಗಿ ಮಾತನಾಡುತ್ತಿರಲಿಲ್ಲ; ಆಟವಾಡುತ್ತಿರಲಿಲ್ಲ. ಬೇರೆ ಪಕ್ಷಿಗಳ ಜೊತೆಯಲ್ಲಿ ಗೆಳೆತನ ಮಾಡಲು ಪ್ರಯತ್ನಿಸುತ್ತಿತ್ತು. ಅವು ಕಾಗೆಯ ಜೊತೆಯಲ್ಲಿ ಆಡಲು ಇಷ್ಟಪಡದೆ ಹೊರಟು ಹೋಗುತ್ತಿದ್ದವು. ಇದರಿಂದ ಕಾಗೆಗೆ ಮಿತ್ರರಾರೂ ಇರಲಿಲ್ಲ. ಹೀಗಾಗಿ ಅದು ಒಂಟಿಯಾಗಿ ಜೀವಿಸುತ್ತಿತ್ತು.

ಅದು ಒಂದು ದಿನ ಒಂದು ಮರದ ಮೇಲೆ ತನ್ನ ವಿರೂಪದ ಬಗ್ಗೆ ಯೋಚನೆ ಮಾಡುತ್ತಾ ಕುಳಿತುಕೊಂಡಿತ್ತು. ಬೇರೆ ಪ್ರಾಣಿ–ಪಕ್ಷಿಗಳು ಎಷ್ಟು ಅಂದವಾಗಿ ಇವೆ, ಕಾಗೆಗಳಿಗೆ ಮಾತ್ರ ಇಂತಹ ಕೆಟ್ಟ ರೂಪವನ್ನು ಯಾಕೆ ಕೊಟ್ಟೆ ದೇವರೇ ಎಂದು ಚಿಂತಿಸುತ್ತಿತ್ತು. ಆಗ ಮರಿ ಕಾಗೆಗೆ ದೂರದಲ್ಲಿ ಒಂದು ಹಂಸ ಸ್ನಾನ ಮಾಡುತ್ತಿರುವುದು ಕಾಣಿಸಿತು. ಅದರ ಬಿಳಿಯ ಬಣ್ಣ ಹಾಗೂ ಅಂದವನ್ನು ನೋಡುತ್ತಾ ಹಾಗೇಯೇ ಮೈಮರೆಯಿತು. ಹಂಸದ ಹಾಗೆ ತಾನೂ ಅಂದವಾಗಿ ಕಾಣಲು ಏನಾದರೂ ಮಾಡಲೇಬೇಕೆಂದು ನಿಶ್ಚಯಿಸಿಕೊಂಡಿತು.

ಸ್ವಲ್ಪ ಸಮಯದ ನಂತರ ಕಾಗೆಗೆ ಥಟ್ಟನೆ ಒಂದು ಉಪಾಯವು ಹೊಳೆಯಿತು. ಹಂಸವು ಸ್ನಾನವನ್ನು ಮಾಡಿದ ನೀರಿನಲ್ಲಿ ತಾನೂ ಸ್ನಾನ ಮಾಡಿದರೆ ಬೆಳ್ಳಗಾಗುವೆನೆಂದು ತಕ್ಷಣವೇ ನೀರಿಗೆ ಧುಮುಕಿತು. ಪದೇ ಪದೇ ಸ್ನಾನ ಮಾಡುವುದು, ನೀರಿನಿಂದ ಹೊರಕ್ಕೆ ಹಾರುವುದು, ತನ್ನ ಬಣ್ಣವನ್ನು ನೋಡಿಕೊಳ್ಳುವುದು.. ಹೀಗೆ ಎಷ್ಟೋ ಸಲ ಮಾಡಿದರೂ ಬೆಳ್ಳಗಾಗದಿರುವುದನ್ನು ನೋಡಿ ನಿರಾಶೆಗೊಂಡಿತು.

ಇದನ್ನು ನೋಡುತ್ತಾ ಪಕ್ಕದಲ್ಲಿ ಕುಳಿತಿದ್ದ ಹಂಸ ಜೋರಾಗಿ ನಗತೊಡಗಿತು. ಹಂಸ ಕಾಗೆಯನ್ನು ಹೀಯಾಳಿಸುತ್ತ 'ಗೆಳೆಯಾ, ನೀನು ನೂರು ಸಾರಿ ಸ್ನಾನ ಮಾಡಿದರೂ ಬೆಳ್ಳಗಾಗುವುದು ಹಾಗಿರಲಿ, ನಿನ್ನ ಕಪ್ಪು ಬಣ್ಣ ಸ್ವಲ್ಪವೂ ಕಡಿಮೆಯಾಗುವುದಿಲ್ಲಾ' ಎಂದಿತು.

ಕಾಗೆಯು ಅವಮಾನದಿಂದ ತಲೆತಗ್ಗಿಸಿತು. ಅಲ್ಲಿಯೇ ಕುಳಿತಿದ್ದ ಒಂದು ಮುದಿ ಕಾಗೆಯು ಇದನ್ನೆಲ್ಲ ನೋಡಿ ಮರಿಕಾಗೆಯನ್ನು ಪಕ್ಕಕ್ಕೆ ಕರೆದು 'ನೋಡು ಮರಿ, ಹೊರಗಿನ ಅಂದ– ಚಂದಕ್ಕಿಂತ ಆಂತರಿಕ ಸೌಂದರ್ಯವು ಮುಖ್ಯ. ಬಾಹ್ಯ ಸೌಂದರ್ಯ, ರೂಪ, ಆಕಾರ ಇವೆಲ್ಲಾ ದೇವರ ಸೃಷ್ಟಿ. ಇದೇ ಕೊನೆಯವರೆಗೂ ಇರುತ್ತದೆ. ನನ್ನವರನ್ನು ಕೀಳೆಂದು ತಿಳಿದುಕೊಂಡರೆ ಬೇರೆಯವರು ನಿನ್ನನ್ನು ತಿರಸ್ಕರಿಸುವುದು ತಪ್ಪೇನು?' ಎಂದು ಬುದ್ಧಿ ಹೇಳಿತು. ಅಂದಿನಿಂದ ಮರಿಕಾಗೆ ಸಂತಸದ ಜೀವನ ಸಾಗಿಸತೊಡಗಿತು.

**– ಶ್ರೀಕಾಂತ ಹಾದಿಮನಿ, ಶಿರಹಟ್ಟಿ**

## ನಿಮಗೆಷ್ಟು ಗೊತ್ತು

## ಮರೆಯಾಗುತ್ತಿರುವ ನತ್ತಿಂಗ

ಕಾಮನ್ ಇಂಡಿಯನ್ ನೈಟ್ ಜಾರ್ ಎಂದು ಎಲ್ಲೆಡೆ ಗುರ್ತಿಸಲ್ಪಡುವ ಕ್ಯಾಪ್ರಿಮುಲ್ಗಿಡೆ ಕುಟುಂಬಕ್ಕೆ ಸೇರಿದ ಈ ಹಕ್ಕಿಯ ವೈಜ್ಞಾನಿಕ ನಾಮಧೇಯ ಕ್ಯಾಪ್ರಿಮುಲ್ಗುಸ್ ಏಷಿಯಾಟಿಕಸ್. ಕನ್ನಡಿಗರ ಬಾಯಲ್ಲಿ ಇದು ನತ್ತಿಂಗ ಎಂದೇ ಪ್ರಸಿದ್ಧಿ. ಆಫ್ಘಾನಿಸ್ತಾನ, ಇರಾನ್, ಮ್ಯಾನ್‍ಮಾರ್, ಥಾಯ್ಲೆಂಡ್, ಕಾಂಬೋಡಿಯಾ, ವಿಯೆಟ್ನಾಂ, ಶ್ರೀಲಂಕಾ, ನೇಪಾಳದ ಹುಲ್ಲುಗಾವಲು, ಉದ್ಯಾನವನಗಳು, ಕೆರೆದಂಡೆಗಳು, ನೀರಾವರಿ ಪ್ರದೇಶಗಳು ಹಾಗೂ ಕೈತೋಟಗಳಲ್ಲಿ ಹೆಚ್ಚಾಗಿ ವಾಸಿಸುತ್ತವೆ. ರಾತ್ರಿ ವೇಳೆ ಮಾತ್ರವೇ ಸಂಚರಿಸುವ ಈ ನಿಶಾಚರಿ ಹಕ್ಕಿಯು ಹಗಲಿನಲ್ಲಿ ಯಾರ ಕಣ್ಣಿಗೂ ಕಾಣದಂತೆ ಮರಗಳ ನಡುವೆ ಬಚ್ಚಿಟ್ಟುಕೊಂಡಿರುತ್ತದೆ.



ನತ್ತಿಂಗಗಳ ದೇಹವು ಚಿಕ್ಕದಾಗಿದ್ದು ಸುಮಾರು 24 ಸೆಂಟಿಮೀಟರ್ ಉದ್ದ ಹಾಗೂ 40 ರಿಂದ 45 ಗ್ರಾಂಗಳಷ್ಟು ತೂಕವನ್ನು ಹೊಂದಿರುತ್ತವೆ. ಇವುಗಳ ದೇಹದ ಮೇಲ್ಭಾಗವು ಬೂದು ಮಿಶ್ರಿತ ಕಂದು ಹಾಗೂ ಕಪ್ಪು ಮಿಶ್ರಿತ ಕಂದು ಬಣ್ಣದ ಗರಿಗಳನ್ನು ಹೊಂದಿರುತ್ತದೆ. ಇದರಿಂದಾಗಿ ದೇಹವು ಮರದ ತೊಗಟೆಯ ಬಣ್ಣವನ್ನು ಹೊಂದಿದ್ದು ಹಗಲಿನಲ್ಲಿ ಸುಲಭವಾಗಿ ಗುರುತಿಸಲು ಸಾಧ್ಯವಾಗದು. ಬಾಲದ ಪುಕ್ಕವು ಚಿಕ್ಕದಾಗಿದ್ದು ಬಿಳೀ ತುದಿಯಿಂದ ಕೂಡಿರುತ್ತದೆ. ಕೆನ್ನೆಯ ಭಾಗವು ಕಪ್ಪಾಗಿದ್ದು ಕುತ್ತಿಗೆಯ ಸುತ್ತಲೂ ಬಿಳೀ ಬಣ್ಣದ ಚುಕ್ಕೆಗಳಿರುತ್ತವೆ. ಎದೆಭಾಗದಲ್ಲಿ ಕಂದುಬಣ್ಣದ ಪಟ್ಟಿಗಳಿರುತ್ತವೆ. ರೆಕ್ಕೆಗಳು ಉದ್ದವಾಗಿದ್ದರೆ ಕಾಲುಗಳು ಕಿರಿದಾಗಿರುತ್ತವೆ ಮತ್ತು ನೆತ್ತಿಯು ಬೂದುಬಣ್ಣದಿಂದ ಕೂಡಿರುತ್ತದೆ.

ಈ ಹಕ್ಕಿಗಳು ರಾತ್ರಿವೇಳೆಯಲ್ಲಿ ಚುಕ್ ಚುಕ್ ಎಂದು ಶಬ್ದ ಹೊರಡಿಸುತ್ತಾ ದೀಪದ ಬೆಳಕಿನ ಸುತ್ತಲೂ ಹಾರಾಡುವ ಸಣ್ಣ ಕೀಟಗಳು, ಮಿಡತೆಗಳು, ಜೀರುಂಡೆಗಳು, ರೆಕ್ಕೆಹುಳುಗಳು, ಇರುವೆಗಳು ಹಾಗೂ ಇನ್ನಿತರೆ ಬೆಳಕಿನ ಕೀಟಗಳ ಮೇಲೆ ದಾಳಿಮಾಡಿ ತಮ್ಮ ಕೊಕ್ಕಿನಿಂದ ಬೇಟೆಯಾಡಿ ಹಿಡಿದು ತಿನ್ನುತ್ತವೆ. ಹಗಲಿನಲ್ಲಿಯೂ ಇವು ಪಾತರಗಿತ್ತಿಗಳನ್ನು ಹಿಡಿದು ತಿನ್ನುತ್ತವೆ.

**– ಪ.ನಾ.ಹಳ್ಳಿ.ಹರೀಶ್ ಕುಮಾರ್**